ನೆನಪೋಲೆ

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/198/ಆಡಿಟ್-14/2017-18/ನೇ.ವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:07.10.2017.

**ಸುತ್ತೋಲೆ**

ವಿಷಯ: 2009ರಲ್ಲಿ ಕೆ.ಪಿ.ಎಸ್.ಸಿ. ಮೂಲಕ ನೇಮಕಗೊಂಡಿರುವ ಸಹಾಯಕ ಪ್ರಾಧ್ಯಾಪಕರುಗಳ ಪದವಿಗಳ ನೈಜತೆಯನ್ನು ಪರಿಶೀಲಿಸುವ ಬಗ್ಗೆ.

ಉಲ್ಲೇಖ: ಮಹಾಲೇಖಾಪಾಲರು, ಕರ್ನಾಟಕ ರಾಜ್ಯ ಇವರ ಆಡಿಟ್ ಆಕ್ಷೇಪಣಾ ವರದಿ ದಿನಾಂಕ:05.07.2017.

******

ಮಹಾಲೇಖಾಪಾಲರು, ಕರ್ನಾಟಕ ರಾಜ್ಯ ಇವರ ಉಲ್ಲೇಖಿತ ಆಡಿಟ್ ಆಕ್ಷೇಪಣಾ ವರದಿಯಲ್ಲಿ 2009 ರಲ್ಲಿ ಆಯ್ಕೆಯಾದ ಸಹಾಯಕ ಪ್ರಾಧ್ಯಾಪಕರುಗಳು ಆಯ್ಕೆ ಸಂದರ್ಭದಲ್ಲಿ ಎಂ.ಫಿಲ್ ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಿ, ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುವ ಹಿನ್ನೆಲೆಯಲ್ಲಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2009ರಲ್ಲಿ ಕೆ.ಪಿ.ಎಸ್.ಸಿ. ಮೂಲಕ ನೇಮಕಗೊಂಡಿರುವ ಸಹಾಯಕ ಪ್ರಾಧ್ಯಾಪಕರುಗಳು ಆಯ್ಕೆ ಸಮಯದಲ್ಲಿ ಸಲ್ಲಿಸಿರುವ ಎಂ.ಫಿಲ್. ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಲು ಈ ಅವಧಿಯಲ್ಲಿ ಆಯ್ಕೆಯಾಗಿ ತಮ್ಮ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ/ಸಹಾಯಕ ಪ್ರಾಧ್ಯಾಪಕರುಗಳ ಪಟ್ಟಿಯೊಂದಿಗೆ ಎಂ.ಫಿಲ್. ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳ ಪ್ರತಿಯನ್ನು ಪಡೆದು, ದೃಢೀಕರಿಸಿ, ದಿನಾಂಕ:28.09.2017 ರೊಳಗಾಗಿ ಇ-ಮೇಲ್ ವಿಳಾಸ dce.mphil2009@gmail.com ಗೆ ಕಳುಹಿಸುವಂತೆ ದಿನಾಂಕ:26.09.2017 ರ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಆದರೆ, ಕೆಲವು ಕಾಲೇಜುಗಳಿಂದ ಇದುವರೆವಿಗೂ ಎಂ.ಫಿಲ್. ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳು ಸ್ವೀಕೃತವಾಗಿರುವುದಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಸದರಿ ಮಾಹಿತಿಯನ್ನು **ಇದುವರೆವಿಗೂ ಕಳುಹಿಸದೇ ಇರುವ ಕಾಲೇಜಿನ ಪ್ರಾಂಶುಪಾಲರುಗಳು** ತಮ್ಮ ವೈಯಕ್ತಿಕ ಗಮನಹರಿಸಿ 2009ರಲ್ಲಿ ಕೆ.ಪಿ.ಎಸ್.ಸಿ. ಮೂಲಕ ಎಂ.ಫಿಲ್. ಪ್ರಮಾಣ ಪತ್ರದ ಆಧಾರದ ಮೇಲೆ ನೇಮಕಗೊಂಡಿರುವ ಸಹಾಯಕ ಪ್ರಾಧ್ಯಾಪಕರುಗಳ ಪಟ್ಟಿಯೊಂದಿಗೆ ಎಂ.ಫಿಲ್. ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳ ಪ್ರತಿಯನ್ನು ಪಡೆದು, ದೃಢೀಕರಿಸಿ, ಇ-ಮೇಲ್ ವಿಳಾಸ dce.mphil2009@gmail.com ಗೆ **ದಿನಾಂಕ:11.10.2017ರ** ಒಳಗಾಗಿ ತಪ್ಪದೇ ಕಳುಹಿಸುವಂತೆ ಮತ್ತೊಮ್ಮೆ ಸೂಚಿಸಲಾಗಿದೆ. ನಿಗದಿತ ದಿನಾಂಕದ ಒಳಗೆ ಸಂಬಂಧಪಟ್ಟ ದಾಖಲಾತಿಗಳನ್ನು ಕಳುಹಿಸದ ಪ್ರಾಂಶುಪಾಲರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ:

1) ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
2) ಕಛೇರಿ ಪ್ರತಿ.